**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 04/2020</u>**

ದಿನಾಂಕಃ 09.12.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 3 ಪ್ರಾಸಾ - 3

| | | |
|---|---|---|
| ಹೆಸರು | ಃ | ಗೌರಮ್ಮ |
| ತಂದೆಯ/ಗಂಡನ ಹೆಸರು | ಃ | ತಿಮ್ಮರಾಜು |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಮಂಟಪ, ಮೋಟಗಾನಹಳ್ಳಿ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಮೃತೆ ಗಂಗಹನುಮಕ್ಕ ನನ್ನ ತಾಯಿ. ಪ್ರಾಸಾ 1 ಮತ್ತು ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಸಿದ್ದರಾಜು ನನ್ನ ಸಹೋದರರು. 2 ನೇ ಆರೋಪಿ ಲಕ್ಷ್ಮಣ ನನ್ನ ತವರು ಊರಿನ ಪಕ್ಕದ ಊರಿನವನು.

2. ಪ್ರಶ್ನಿಸಿದಂತೆ ನಾನು ಆರೋಪಿಗಳ ವಿರುದ್ಧ ಯಾವುದೇ ಹೇಳಿಕೆ ನೀಡಿಲ್ಲ. ಆದರೆ ಪೊಲೀಸರು ಸೂಚಿಸಿದ ದಾಖಲೆಯಲ್ಲಿ ನಾನು ರುಜು ಮಾಡಿದ್ದೇನೆ. ಆದರೆ ನಾನು ಆರೋಪಿಗಳ ವಿರುದ್ಧ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ

ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**

3. ದಿನರಾಕ 21.09.2019 ರಂದು ಪೊಲೀಸರಿಗೆ ಹೇಳಿಕೆ ನೀಡಿ ನನ್ನ ಹೇಳಿಕೆಯಲ್ಲಿ "ದಿನಾಂಕ 14.09.2019 ರಂದು ಬೆಳಿಗ್ಗೆ ಸುಮಾರು 7 ಗಂಟೆ ಸಮಯದಲ್ಲಿ ನನ್ನ ತಾಯಿ ನನ್ನ ತವರು ಗ್ರಾಮದಿಂದ 4 ಕಿ.ಮೀ. ದೂರದಲ್ಲಿರುವ ಹುಣಸೇಗೌಡನಪಾಳ್ಯಕ್ಕೆ ಅಕ್ಕಿ ಸ್ವಚ್ಛ ಮಾಡಲು ಬರುತ್ತೇನೆ ಎಂದು ನನ್ನ 2 ನೇ ಅಣ್ಣ ಸಿದ್ದರಾಜುವಿಗೆ ತಿಳಿಸಿ, ಮನೆಯಿಂದ ಹೋಗಿದ್ದು, ಅದೇ ದಿನ ಬಿದಿರಹಳ್ಳಿಯ ವಾಸಿ ನಮ್ಮ ಸಂಬಂಧಿ 2 ನೇ ಆರೋಪಿ ಲಕ್ಷ್ಮಣಪ್ಪ, ನನ್ನ ಅಣ್ಣ 1 ನೇ ಆರೋಪಿ ಸಂಜೆ 4.30 ಕ್ಕೆ ಸಿಕ್ಕಿ, ಟೀ ಅಂಗಡಿಯ ಬಳಿ ಕುಳಿತು ಮಾತನಾಡುವಾಗ, 1 ನೇ ಆರೋಪಿ ನನ್ನ ಅಣ್ಣ ನನ್ನ ತಾಯಿಯ ವಿಚಾರದಲ್ಲಿ ಬೇಜಾರಾಗಿದ್ದು, ತನಗೆ ಇನ್ನೊಂದು ಮದುವೆಯನ್ನು ಮಾಡಿಸು ಎಂದರೆ ಬಾಯಿಗೆ ಬಂದಂತೆ ಬೈದಿರುತ್ತಾರೆ ಎಂದು ನುಡಿದು ಮುಂದುವರಿದು ನನ್ನ ತಾಯಿಯ ಬಗ್ಗೆ ವೈಶಮ್ಯ ವ್ಯಕ್ತಪಡಿಸಿದ್ದು, ಈ ವಿಚಾರದಲ್ಲಿ ಇಬ್ಬರು ಆರೋಪಿಗಳು ನನ್ನ ತಾಯಿಯನ್ನು ಕೊಲೆ ಮಾಡಲು ಸಂಚು ಮಾಡಿ, ಮುಂದುವರಿದ ಅದೇ ದಿನ ಸಂಜೆ ನನ್ನ ತಾಯಿಯನ್ನು ಕೊಲೆ ಮಾಡಿರುತ್ತಾರೆ, ನಂತರ ಕೊಲೆಯನ್ನು ಮುಚ್ಚುಹಾಕಲು ಶವವನ್ನು ಹಳ್ಳವೊಂದಕ್ಕೆ ಹಾಕಿ ಅದರ ಮೇಲೆ ಸೊಪ್ಪು

ಸದೆಯನ್ನು ಮುಚ್ಚಿರುತ್ತಾರೆ, ಈ ಬಗ್ಗೆ ಒಪ್ಪಿಕೊಂಡಿರುತ್ತಾರೆ" ಎಂದು ನಮೂದಿಸಿ ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಪ್ಪದ ಹೇಳಿಕೆಯನ್ನು ಈಗ ನಿಶಾನೆ ಪಿ 4 ಎಂದು ಗುರುತು ಮಾಡಲಾಯಿತು.

4. 1 ನೇ ಆರೋಪಿ ನನ್ನ ಸಹೋದರನಾಗಿದ್ದು ಮತ್ತು 2 ನೇ ಆರೋಪಿ ನನ್ನ ಸಂಬಂಧಿಕನಾಗಿದ್ದು, ಅವರಿಗೆ ಅನುಕೂಲ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಕೆ.ವಿ.ಕೆ. ವಕೀಲರಿಂದ – ಆರೋಪಿಗಳ ಪರವಾಗಿಃ- ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.